ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶ ಕುರಿತು

726 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ತಲಾ ಎಕರೆಗೆ ವೆಚ್ಚ ಮಾಡುತ್ತಿರುವ ನಿರ್ವಹಣಾ ವೆಚ್ಚವೆಷ್ಟು?

ಆ) ಈ ಮೊಬಲಗು ಯಾವಾಗ ನಿಗದಿಗೊಳಿಸಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) 1989-90 ರಿಂದ 1992-93ರ ಸಾಲಿನವರೆಗೆ ಸರಾಸರಿ ಎಕರೆ ಒಂದಕ್ಕೆ 130-00 ರೂಪಾಯಿಗಳು.

ಆ) ಇದು 1987-88ನೇ ಸಾಲಿನಿಂದ ಚಾಲ್ತಿಯಿಂದಿರುತ್ತದೆ.

ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಭಾಗ್ಯ ಜ್ಯೋತಿ ದೀಪಗಳನ್ನು ಅಳವಡಿಸುವ ಬಗ್ಗೆ

796 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಹರಿಜನ ಗಿರಜನರಿಗೆ ಮೀಸಲಾಗಿಸಿರುವ ಹಣದಲ್ಲಿ ಭಾಗ್ಯಜ್ಯೋತಿ ದೀಪಗಳನ್ನು ಬಡವರ ಮನೆಗಳಿಗೆ ಅಳವಡಿಸಲು ಸರ್ಕಾರಕ್ಕೆ ಮನವಿ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ತೀರ್ಮಾನವೇನು?

ಶ್ರೀ ಶ್ರೀರಂಗದೇವ ರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ತುಂಗಾ ಮೇಲ್ದಂಡೆ ಯೋಜನೆ ಜಾರಿ ಕುರಿತು

765 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರುವಾಗ ಮಾಲತಿ ಜಲಾನಯನ ಮುಳುಗಡೆಯಾಗುವದೆ.

ಆ) ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ತಜ್ಞರಿಂದ ಸಂಪೂರ್ಣವಾಗಿ ವರದಿ ತಯಾರು ಮಾಡಲಾಗಿದೆಯೇ.

ಇ) ತುಂಗಾ ಮೇಲ್ದಂಡೆ ಯೋಜನೆ ಜಾರಿಗೆ ತರುವಾಗ ಮಾಲತಿ ಜಲಾನಯನ ಗಾಜನೂರಿನ ಹತ್ತಿರ 1200 ಪ್ಲಾಟಿಸ ಗೇಟ್ ಕಟ್ಟಿ ಜಾರಿಗೆ ತಂದರೆ ಧಾರವಾಡ ಜಿಲ್ಲೆಯ ಶಿಗ್ಗಾಂವ, ಸವಣೂರ್, ಶಿರಹಟ್ಟಿ, ಮುಂಡರಗಿ ಮುಂತಾದ ತಾಲ್ಲೂಕುಗಳ ಪ್ರದೇಶಕ್ಕೆ ನೀರಾವರಿ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಇಲ್ಲ